**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 28-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎನ್ ಪಿ ವಕೀಲರವರಿಂದಃ-**

ನಾನು ಮನ್ ಮುಲ್ ನಲ್ಲಿ ಸೀನಿಯರ್ ಟೆಕ್ನಿಷಿಯನ್ ಆಗಿ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಗೆಜ್ಜಲಗೆರೆ ಮನ್ ಮುಲ್ ನಲ್ಲಿ ಕೆಲಸಕ್ಕೆ ಸೇರಿದಾಗ ನನಗೆ ಎಲ್ಲಾ ಕಳೆದು 30 ಸಾವಿರ ಸಂಬಳ ಬರುತ್ತಿತ್ತು. ಸದರಿ ಸಂಬಳವನ್ನು ಹೊರತುಪಡಿಸಿ ನನಗೆ ಬೇರೆ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವ್ಯವಸಾಯ ಮಾಡುತ್ತೇನೆ ಎನ್ನುತ್ತಾರೆ. ನನಗೆ 1 ವರೆ ಎಕರೆ ಜಮೀನು ಇದೆ, ಸದರಿಯು ತರಿ ಮತ್ತು ಖುಷ್ಕಿ  ಜಮೀನು ಆಗಿದೆ. ಸದರಿ ಜಮೀನು ನನ್ನ ದೊಡ್ಡಪ್ಪ ಚಿಕ್ಕಪ್ಪನವರ ಹೆಸರಿನಲ್ಲಿ ಜಂಟಿ ಇದೆ. ನನ್ನ ತಂದೆಯ ಸಹೋದರರು 4 ಜನ. ಸದರಿ ಜಮೀನುಗಳಲ್ಲಿ ನನ್ನ ತಂದೆ 20 ಗುಂಟೆ ಜಮೀನು ನನಗೆ ಬರುತ್ತದೆ. ಸಾಕ್ಷಿ ಮುಂದುವರೆದು ಎಲ್ಲಾ ಜಮೀನನ್ನು  ನಾನೇ ನೋಡಿಕೊಳ್ಳುತ್ತಿದ್ದೆನೆ ಎನ್ನುತ್ತಾರೆ. ನನ್ನ ತಂದೆ ತಾಯಿ ಜೀವಂತ ಇದ್ದಾರೆ. ನನ್ನೊಂದಿಗೆ ಇಬ್ಬರು ಸಹೋದರಿಯರು ಒಡಹುಟ್ಟಿದವರಾಗಿದ್ದಾರೆ. ಟಮೋಟೋ, ಕಬ್ಬುನ್ನು ಬೆಳೆಯುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಆದಾಯದ ಮೂಲ ಇಲ್ಲ. ಜಮೀನಿನ ಆರ್ ಟಿಸಿ ಯನ್ನು ಹಾಜರುಪಡಿಸುತ್ತೇನೆ. ನನ್ನ ಹೆಸರಿನಲ್ಲಿ ಕಬ್ಬುನ್ನು ಸರಬರಾಜು ಮಾಡುವುದಿಲ್ಲ. ತರಕಾರಿಯನ್ನು ಮಾರುಕಟ್ಟೆಗೆ ಮಾರುವುದಿಲ್ಲ ಆದ್ದರಿಂದ ರಶೀದಿ ಇಲ್ಲ. ನನಗೆ ಇಬ್ಬರು ಮಕ್ಕಳು. ಸದರಿಯವರು 7 ಮತ್ತು 8 ನೇ ತರಗತಿಯನ್ನು ಹಾರಿಜನ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸದರಿ ಶಾಲೆಯಲ್ಲಿ ಆರ್ ಟಿಇ ಯಡಿಯಲ್ಲಿ ವಿದ್ಯಾಭ್ಯಾಸ  ಮಾಡುತ್ತಿದ್ದು ವಾರ್ಷಿಕ 25 ಸಾವಿರ ಶುಲ್ಕವಿದೆ. ವಾರ್ಷಿಕವಾಗಿ ತಲಾ 20 ಸಾವಿರ ಖರ್ಚಾಗುತ್ತದೆ. ಕುಟುಂಬದ ಖರ್ಚು ವರ್ಷ ಸುಮಾರು 5 ಸಾವಿರವಿದೆ. ನನಗೆ ಸಂಬಳ ಬರುತ್ತಿದೆ ಎಂದು ತೋರಿಸಲು  ದಾಖಲಾತಿ ಹಾಜರುಪಡಿಸುತ್ತೇನೆ. ನಾನು ಎಪಿಎಲ್ ಕಾರ್ಡ್ ಹೊಂದಿದ್ದೆನೆ. ನನಗೆ ಬರುವ ಸಂಬಳವು ಕುಟುಂಬದ ನಿರ್ವಹಣೆ ಮತ್ತು ಮಕಕಳ ವಿದ್ಯಾಭ್ಯಾಸಕ್ಕೆ ಸಾಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಕ್ಕಳ ವಿದ್ಯಾಭ್ಯಾಸಕ್ಕೆ ಅಷ್ಟು ಖರ್ಚಾಗುವುದಿಲ್ಲ  ಎನ್ನುತ್ತಾರೆ. ನಾನು ಸುಮಾರು 5-6 ವರ್ಷಗಳಿಂದ ಆದಾಯ ತೆರಿಗೆ ಪಾವತಿಯನ್ನು ಮಾಡುತ್ತಿದ್ದೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ಆದಾಯ ತೆರಿಗೆಯಲ್ಲಿ ಯಾರಿಗೆ ಸಾಲ ನೀಡಿದ್ದೆ ಎಂದು ಮತ್ತು  ಸಾಲ ನೀಡಬೇಕು ಎಂದು ತೋರಿಸಿಲ್ಲ. ಅದನ್ನು ತೋರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ತೋರಿಸಬೇಕು ಎನಿಸಲಿಲ್ಲ ಎನ್ನುತ್ತಾರೆ.

ಆರೋಪಿಯು 12-13 ವರ್ಷಗಳಿಂದ ಪರಿಚಯವಿದ್ದಾರೆ. ಆರೋಪಿಯವರು ನಾಗಮಂಗಲದ ಕರಡಹಳ್ಳಿಯವರು. ಸದರಿಯವರಿಗೆ ತಂದೆ ಇಲ್ಲ, ತಾಯಿ ಮಾತ್ರ ಇರುತ್ತಾರೆ, ಅವರು ನನಗೆ ಸಂಬಂಧಿಕರು ಆಗಬೇಕು ಎನ್ನುತ್ತಾರೆ. ವಿವಾದಿತ ವ್ಯವಹಾರ ಹೊರತುಪಡಿಸಿ ಆರೋಪಿ ಮತ್ತು ನನ್ನ ನಡುವೆ ಬೇರೆ ಹಣಕಾಸಿನ ವ್ಯವಹಾರ ಇಲ್ಲ., ಜಮೀನಿನ ವ್ಯವಹಾರ ಇದೆ. ನಾನು ಆರೋಪಿಯಿಂದ

2016 ರಲ್ಲಿ ಕ್ರಯದ ಕರಾರು ಪತ್ರ ಬರೆಸಿಕೊಂಡು ಜಿಪಿಎ ಪಡೆದುಕೊಂಡಿದ್ದೆನೆ. ಕ್ರಯದ ಕರಾರು ಪತ್ರವನ್ನು ಆರೋಪಿ ಮತ್ತು ಅವರ ತಾಯಿ ಮತ್ತು ಅಣ್ಣ ಬರೆದುಕೊಟ್ಟಿರುತ್ತಾರೆ.

**Prays time for further cross examination granted.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು